ಎಲ್ಲರೂ ಹೊರಟುಹೋದಮೇಲೆ ಆಕೆ ಎಂದಿನಂತೆ ಒಂಟಿಯಾಗಿ ಉಳಿದಳು. ಸೋಮಾರಿತನದಿಂದ ತಿಂಡಿಯ ತಟ್ಟೆಗಳನ್ನು ನಿಧಾನಕ್ಕೆ ಎತ್ತಿದಳು. ಯಾವಾಗಲೂ ಮಾಡುವ ಹಾಗೆ ತಟ್ಟೆಯಲ್ಲಿ ಅಳಿದುಳಿದುದ್ದನ್ನು ಗುಳುಮ್ಮನೆ ನುಂಗಿದಳು. 'ಉಳಿದ ಪಲ್ಯ ತಿಪ್ಪೆಗೆ ಚೆಲ್ಲುವ ಬದಲು, ಅಥವಾ ತಟ್ಟೆಯಲಿ ಮುಸುರೆ ಇದೇಂತ ತೊಳೆಯದೆ ಹಾಗೆ ಇಡೋ ಬದಲು ಇದು ವಾಸಿ' ಎಂದುಕೊಂಡಳು. ಒಂದು ಕಪ್ಪು ಚಹಾ ಮಾಡಿಕೊಂಡು ಹೀರುತ್ತ, ಟೇಬಲ್ಲಿನಲ್ಲಿ ಬಿದ್ದಿದ್ದ ಬ್ರೆಡ್ಡಿನ ತುಂಡನ್ನು ಕುರುಕಿದಳು. ತಿಂದದ್ದು ಅತಿಯಾಯ್ತು ಅನ್ನಿಸಿದಾಗ ಕೋಣೆ ಓರಣವಾಗಿರಿಸುವ ಕೆಲಸಕ್ಕೆ ಕಾಲೆಳೆದಳು. ಬಚ್ಚಲು ಮನೆಗೆ ಕಾಲಿಟ್ಟಾಗ ತನ್ನೆದುರು ಕನ್ನಡಿ ಕಂಡಳು. ತನ್ನನು ತಾನೇ ನೋಡಿದಳು: ಬಣ್ಣವೇ ಇಲ್ಲದ ನಿಸ್ತೇಜ ಮುಖ, ಅಗಲವಾಗಿದ್ದರೂ ಕಳೆಗುಂದಿದ ಕಣ್ಣು, ಭಾವನೆಗಳೇ ಇಲ್ಲದ ದೇಹ, ಜೀವಂತಿಕೆಯಿಂದ ಸಂಬಂಧವನ್ನೇ ಕಡಿದುಕೊಂಡ ಮುಖ, ತನ್ನೆಲ್ಲ ಕಸುವನ್ನು ಕೂಡಿಸಿ 'ಜೀವನರಾಗ ಈ ಅನುರಾಗ' ಹಾಡಲು ನೋಡಿದಳು. ಆಕೆಯ ಹೋರಾಟದ ಅನಂತರವೂ ದನಿ ಹೊರಗೆ ಬರಲಿಲ್ಲ. ತನ್ನ ಗಂಟಲು ಸರಿಮಾಡಿಕೊಂಡು ಮತ್ತೆ ಹಾಡಲೆತ್ನಿಸಿದಳು: 'ಎಂಥ ಸುದಿನ ಈ ದಿನ' ಗಂಟಲಲ್ಲಿ ದೊಡ್ಡ ಕಟ್ಟಿಗೆ ತುಂಡು ಸಿಕ್ಕಿಕೊಂಡಂತೆ ಅವಳ ದನಿ ಹೂತುಹೋಗಿತ್ತು. ಮತ್ತೆ ಮತ್ತೆ ಗಂಟಲನ್ನು ಸರಿಮಾಡಿಕೊಂಡು ಮತ್ತೊಂದು ಹಾಡು ಹೇಳಲು ಯತ್ನಿಸಿದಳು. ತನ್ನ ಹಳೆಯ ದನಿ ಕೇಳಿ ತಾನೇ ಬೆದರಿದಳು.

ಈ ಲೋಕಕ್ಕೆ ಬಂದಾಗಿನಿಂದ ಕೇಳಿದ ತನ್ನ ದನಿ, ತನ್ನದೇ ಸ್ವಂತ ದನಿ, ನಿಸ್ತೇಜ, ಗಡಸುದನಿ, ಮಧುರತೆ, ದಿವ್ಯತೆ, ಚೆಲುವು, ಕೋಮಲತೆಯಿಂದ ಗಾವುದ ದೂರವಿದ್ದ ದನಿ. ಆಕೆ ಮತ್ತೊಮ್ಮೆ ತದೇಕ ತನ್ನ ಮುಖವನ್ನು ನೋಡಿಕೊಂಡಳು. ಬಹುಕಾಲದಿಂದ ನೋಡುತ್ತ ಬಂದ ಅದೇ ಹಳೆಯ ಮುಖ. ಸಯೀದ ಒಮ್ಮೆ ಕಹಿ ನಗೆ ನಕ್ಕಳು, ತಲೆಯನ್ನು ವಿಷಾದದಿಂದ ಅಲುಗಿಸಿದಳು.


ಅನಂತರ, ನಿಧಾನ ವೈದ್ಯರು ನೀಡಿದ ಎರಡೂ ಬಾಟಲಿಯ ಗುಳಿಗೆಗಳನ್ನು ಕೈಯಲ್ಲಿ ತೆಗೆದುಕೊಂಡು ಕಕ್ಕಸುಗುಂಡಿಗೆ ಹಾಕಿದಳು. ಬಳಿಕ ಸುಮಾರು ನೀರು ಸುರಿದಳು.

## ಸಾಲ್ವಾ ಬಕ್ರ್ (1949)



ಈಜಿಪ್ಟ್‌ನ ಸಾಲ್ವಾ ಬಕ್ರ್ ವಿಮರ್ಶಕಿ, ಕತೆಗಾರ್ತಿ ಮತ್ತು ಕಾದಂಬರಿಗಾರ್ತಿ. ಬಿಸಿನೆಸ್ ಮ್ಯಾನೇಜ್‌ಮೆಂಟ್ ಮತ್ತು ಸಾಹಿತ್ಯ ವಿಮರ್ಶೆಯಲ್ಲಿ ಪದವಿಗಳನ್ನು ಪಡೆದ ಬಳಿಕ ಅವರು ಅರೆಬಿಕ್ ಭಾಷೆಯ ವಿವಿಧ ಪತ್ರಿಕೆಗಳಿಗೆ ಸಿನಿಮಾ ಮತ್ತು ರಂಗಭೂಮಿಯ ವಿಮರ್ಶಕಿಯಾಗಿ ಕೆಲಸ ಮಾಡಿದ್ದಾರೆ. ಈಜಿಪ್ತ್ ಸಮಾಜದ ವಿವಿಧ ಸ್ತರಗಳಲ್ಲಿರುವ ಮಹಿಳೆಯರ ಸಮಸ್ಯೆಗಳನ್ನು ಸಾಲ್ವಾ ಬಕ್ರ್ ಅವರ ಕತೆಗಳು ಚಿತ್ರಿಸುತ್ತವೆ. ಅವರ ಅನೇಕ ಪುಸ್ತಕಗಳು ಇಂಗ್ಲಿಷ್, ಸ್ಪ್ಯಾನಿಶ್, ಜರ್ಮನ್, ಪೊಲಿಶ್ ಭಾಷೆಗಳಿಗೆ ಅನುವಾದಗೊಂಡಿವೆ.

## ಕೇಶವ ಮಳಗಿ



ಬಳ್ಳಾರಿ ಜಿಲ್ಲೆಯವರು. ಮಳಗಿ ತಮ್ಮ ವಿಶಿಷ್ಟ ನುಡಿಗಟ್ಟು, ಶೈಲಿ, ದನಿ, ಬನಿಯ ಕತೆಗಳಿಂದ ಕನ್ನಡ ಓದುಗರಿಗೆ ಪರಿಚಿತರು. ಜನಸಾಮಾನ್ಯರ ಬದುಕಿನ ಘನತೆ, ಪ್ರೀತಿ, ಅಂತಃಕರಣ, ಮಾನವೀಯತೆಯನ್ನು ಅವರ ಕತೆಗಳು ದಟ್ಟವಾಗಿ ಚಿತ್ರಿಸುತ್ತವೆ. 'ಕಡಲ ತೆರೆಗೆ ದಂಡೆ', 'ಮಾಗಿ ಮೂವತ್ತೈದು', 'ವೆನ್ನೆಲ ದೊರಸಾನಿ', 'ಹೊಳೆ ಬದಿಯ ಬೆಳಗು' ಅವರ ಕಥಾಸಂಕಲನಗಳು. 'ಕುಂಕುಮ ಭೂಮಿ', 'ಅಂಗಧ ಧರೆ' ಅವರ ಕಾದಂಬರಿಗಳು.